MYSORE LEGISLATIVE ASSEMBLY

TWENTY-FIFTH DAY.

Saturday, 27th July 1957.

The House met in the Assembly Hall, Vidhana Soudha, Bangalore, at Thirty Minutes past Eight of the Clock.

MR. SPEAKER (SRI S. R. KANTHI, B.A.,LL.B.) in the Chair.

QUESTIONS AND ANSWERS.

Scheduled Caste Families in Hassan District.

Q.—335. Sri H. K. SIDDAIAH (Belur—Scheduled Castes).—

Will the Government be pleased to state.—

(*a*) the number of Scheduled Caste families residing in Hassan district;

(*b*) the number of families having more than 5 acres of land, the number of families having less than 5 acres and the number of families having no land at all?

A.—Sri R. CHENNIGARAMIAH (Minister for Local Self-Government).—

(*a*) 21,688.

(*b*) (*i*) 3,122;
(*ii*) 9,625;
(*iii*) 8,941.

ಶ್ರೀ ಎಚ್. ಕೆ. ಸಿದ್ದಯ್ಯ.—ಹಾಸನ ಡಿಸ್ಟ್ರಿಕ್ಟ್‌ನಲ್ಲಿ 8,141 ಹರಿಜನ ಕುಟುಂಬಗಳಿಗೆ ಜಮೀನು ಇಲ್ಲವೆಂದು ಹೇಳಿದ್ದೀರಿ? ಅವರಿಗೆ ಜಮೀನು ಕೊಡುವ ವಿಚಾರ ಏನು ಮಾಡಿದ್ದೀರಿ?

*ಶ್ರೀ ಆರ್. ಚೆನ್ನಿಗರಾಮಯ್ಯ.—ಜಮೀನು ಕೊಡುವ ವಿಚಾರದಲ್ಲಿ ಹೊಸದಾಗಿ ಪಾಲಿಸಿ ಮಾಡಿರುವುದನ್ನ ರೆವಿನ್ಯೂ ಮಿನಿಸ್ಟರು ಹೇಳಿದ್ದಾರೆ. ಜಮೀನು ಇಲ್ಲದೆ ಇರುವವರು ಅರ್ಜಿ ಹಾಕಿಕೊಂಡರೆ ಕೊಡುವುದಕ್ಕೆ ಏರ್ಪಾಟು ಮಾಡುತ್ತೇವೆಂದು ಹೇಳಿದ್ದಾರೆ.

ಶ್ರೀ ಎಚ್. ಕೆ. ಸಿದ್ದಯ್ಯ.—ಡಿಪ್ರೆಸ್ಡ್ ಕ್ಲಾಸ್ ರೂಲ್ಸ್ ಪ್ರಕಾರ ಹಿಂದುಳಿದ ಪಂಗಡಗಳ ಎಷ್ಟು ಕುಟುಂಬಗಳಿಗೆ ಜಮೀನು ಕೊಟ್ಟಿದ್ದೀರಿ ಎಂದು ಹೇಳುವುದಕ್ಕೆ ಸಾಧ್ಯವೇ?

ಶ್ರೀ ಆರ್. ಚೆನ್ನಿಗರಾಮಯ್ಯ.—ತಪಸೀಲು ಇಲ್ಲ. ನೋಟೀಸ್ ಬೇಕು.

ಶ್ರೀ ಎನ್. ಜಿ. ನರಸಿಂಹೇಗೌಡ.—ಡಿಪ್ರೆಸ್ಡ್ ಕ್ಲಾಸಿಗೆ ಜಮೀನು ಕೊಡುವುದಕ್ಕೆ ಒಂದು ಪಾಲಿಸಿ ಮಾಡುತ್ತೇವೆಂದು ಹೇಳಿದ್ದೀರಲ್ಲಾ ಆ ಪಾಲಿಸಿ ಮಾಡುವುದಕ್ಕೆ ಮುಂಚೆ ಒಂದು ಸರ್ವೆ ಮಾಡುವುದು ಒಳ್ಳೆಯದಲ್ಲವೇ?

ಶ್ರೀ ಆರ್. ಚೆನ್ನಿಗರಾಮಯ್ಯ.—ನಾವು ಜಮೀನು ಕಡಮೆ ಇರುವವರು ಯಾರು, ಜಮೀನು ಜಾಸ್ತಿ ಇರುವವರು ಯಾರು ಜಮೀನು ಇಲ್ಲದೆ ಇರುವವರು ಯಾರು ಎನ್ನುವುದನ್ನು ತಿಳಿದುಕೊಂಡು ಅನಂತರ ಪಾಲಿಸಿ ನಿರ್ಧಾರ ಮಾಡಿದ್ದೇವೆ. ಉತ್ತರ ನೋಡಿದರೆ ಜಮೀನು ಜಾಸ್ತಿ ಇರುವವರಿಗೆ ಎಷ್ಟು ಕೊಟ್ಟಿದೆ ಮತ್ತು ಜಮೀನು ಕಡಮೆ ಇರುವವರಿಗೆ ಎಷ್ಟು ಜಮೀನು ಕೊಟ್ಟಿದೆ ಎನ್ನುವುದು ಗೊತ್ತಾಗುತ್ತದೆ.

ಶ್ರೀ ಜಿ. ಎನ್. ಪುಟ್ಟಣ್ಣ.—ಡಿಪ್ರೆಸ್ಡ್ ಕ್ಲಾಸಿಗೆ ಜಮೀನು ಕೊಟ್ಟರೆ ಬಹಳ ಸಂತೋಷ. ಅಂತಹ ಜಮೀನನ್ನು 30 ವರ್ಷ ಅವಧಿಯಲ್ಲಿ ಮಾರಕೂಡದು ಎಂದು ಇದ್ದರೂ ಸಹ, ದೊಡ್ಡ ದೊಡ್ಡ ಮನುಷ್ಯರಿಗೆ ಮತ್ತು ಅನುಕೂಲಸ್ಥರಿಗೆ ಮಾರಿರುವುದು ತಮ್ಮ ಗಮನಕ್ಕೆ ಬಂದಿದೆಯೇ?

Mr. SPEAKER.—It is outside the scope of the question.

ಶ್ರೀ ಜಿ. ಎನ್. ಪುಟ್ಟಣ್ಣ.—ಡಿಪ್ರೆಸ್ಡ್ ಕ್ಲಾಸಿನವರು ಜಮೀನು ಮಾರಿಕೂಂಡರೆ ಅಂಥವರ ಮೇಲೆ ಏನಾದರೂ ಕ್ರಮ ತೆಗೆದುಕೊಂಡಿದ್ದೀರಾ?

Sri A. BHEEMAPPA NAIK.—Does the sale or disposal of lands come within the scope of this question?

Mr. SPEAKER.—I agree. It does not come within the scope of this question. It is only about Hassan District.

ಶ್ರೀ ಎ. ಭೀಮಪ್ಪನಾಯಕ್.—ಹಾಸನ ಡಿಸ್ಟ್ರಿಕ್ಟ್‌ನಲ್ಲಿ ಬಡವರಾದ ಡಿಪ್ರೆಸ್ಡ್‌ಕ್ಲಾಸಿನವರಿಗೆ ಕೊಟ್ಟ ಜಮೀನನ್ನು ದೊಡ್ಡ ದೊಡ್ಡವರು ಖರೀದಿಗೆ ಬರೆಸಿಕೊಂಡಿರುವುದು ತಮ್ಮ ಗಮನಕ್ಕೆ ಬಂದಿದೆಯೇ?

Sri M. P. PATIL.—This question is not applicable to the Harijans only who have been granted lands. This question is applicable to all those persons who have been granted Government lands. In the case of those who have broken conditions, their lands will be resumed.

* Asterisk indicates that the remarks or speeches have not been revised by the Member concerned.

ಶ್ರೀ ಜಿ. ಎನ್. ಪುಟ್ಟಣ್ಣ.— ಹರಿಜನರಿಗೆ ಜಮೀನು ಕೊಡುವುದರಲ್ಲಿ ಕಾಡು, ಮೇಡು, ತಿಟ್ಟು ಮತ್ತು ಕೆಲಸಕ್ಕೆ ಬಾರದ ಜಮೀನು ಕೊಟ್ಟಿರುವುದು ತಮ್ಮ ಗಮನಕ್ಕೆ ಬಂದಿಲ್ಲವೇ ?

Mr. SPEAKER.—That is apart.

Sri V. S. PATIL.—May I know whether 8,941 families are agricultural labourers ?

Sri R. CHENNIGARAMIAH.—Most of them are agricultural labourers.

ಶ್ರೀ ಎನ್. ಜಿ ನರಸಿಂಹೇ ಗೌಡ.—ಹಾಸನ ಡಿಸ್ಟ್ರಿಕ್ಟಿನಲ್ಲಿ ಹರಿಜನರಿಗೆ ಜಮೀನು ಕೊಟ್ಟಮೇಲೆ ಅವರು 30 ವರ್ಷಗಳ ಅವಧಿಯಲ್ಲಿ ಯಾರಿಗೂ ಮಾರಕೂಡದು ಎಂದು ಕಾನೂನು ಇದ್ದರೂ ಅದನ್ನು ಮೀರಿ ಹಾಸನ ಡಿಸ್ಟ್ರಿಕ್ಟಿನಲ್ಲಿ ಜಮೀನು ಕೊಟ್ಟ 10 ವರ್ಷಗಳಲ್ಲಿ ಮಾರಿಕೊಂಡಿದ್ದಾರೆ. ಅದರ ಮೇಲೆ ಏನು ಕ್ರಮ ತೆಗೆದುಕೊಂಡಿದ್ದೀರಿ ?

Sri M. P. PATIL.—I have replied already.

Taking over of the Administration of Shanidevaru Temple at Pavagada by the Muzrai Department.

Q.—374. Sri G. N. PUTTANNA.—(Tumkur).—

Will the Government be pleased to state.—

(*a*) whether it has come to their notice that the Shanidevaru (ಶನಿದೇವರು) Temple near the Bus Stand at Pavagada town is having a income of Rs. 500 or more per week ;

(*b*) whether they are aware that during the Jatra of the said temple held between 24th February 1957 and 2nd March 1957 a sum of Rs. 1,750 excluding Kanike, was collected as Golaka amount ;

(*c*) whether they are aware that in spite of repeated petitions and telegrams to the concerned authorities the management of the said temple is still in the hands of some private individuals ;

(*d*) whether they would get the accounts audited and published for the information of the public and devotees regarding the amount collected, spent and the balance available ;

(*e*) whether they propose to institute an urgent enquiry and take the management of the said temple under Muzrai Department ;

A.—Sri M. P. PATIL (Minister for Revenue).—

(*a*) The local officers have reported that petitions have been received from the public that the institution which is a private institution is having a good income.

(*b*) Yes.

(*c*) Petitions have been received from private individuals urging that the management of the temple should be taken over by Government.

(*d*) This will be considered. It is reported that the accounts are being audited by a firm of chartered accountants at the instance of the Sri Shanidevaru Karya Nirvahaka Sangha.

(*e*) The matter is being enquired into by local officers.

ಶ್ರೀ ಜಿ. ಎನ್. ಪುಟ್ಟಣ್ಣ.—ಸ್ವಾಮಿ. ಕ್ಲಾಸ್, (*a*) ಗೆ ಉತ್ತರ ಕೊಟ್ಟಿದ್ದೀರಿ. ಪ್ರೈವೇಟ್ ಇನ್ಸ್ಟಿಟ್ಯೂಷನ್ ಎಂದರೆ ಅರ್ಥವಾಗಲಿಲ್ಲ.

*ಶ್ರೀ ಎಂ. ಪಿ. ಪಾಟೀಲ್.—ಹಳೆಯ ಮೈಸೂರು ಮುಜರಾಯಿ ಆಕ್ಟ್ ಪ್ರಕಾರ ದೇವಸ್ಥಾನ ಅಥವಾ ಮಠಕ್ಕೆ ಸರ್ಕಾರಿ ಗ್ರಾಂಟ್ ದೊರೆಯುತ್ತದೆ. ಅಂಥದು ಮುಜರಾಯ್ ಡಿಪಾರ್ಟ್‌ಮೆಂಟ್ ಕಂಟ್ರೋಲಿನಲ್ಲಿದೆ ; ಉಳಿದದ್ದು ಪ್ರೈವೇಟ್. ಪ್ರೈವೇಟ್ ಎಂದರೆ ಗೌರ್ನಮೆಂಟ್ ಸಂಬಂಧವಿಲ್ಲದೇ ಇರುವುದು.

ಶ್ರೀ ಜಿ. ಎನ್. ಪುಟ್ಟಣ್ಣ.—ಮುಜರಾಯ್ ಕಾನೂನಿನ ಪ್ರಕಾರ ವರ್ಷಕ್ಕೆ 300 ರೂಪಾಯಿ ಮೇಲ್ಪಟ್ಟು ಉತ್ಪತ್ತಿ ಇರತಕ್ಕ ಎಲ್ಲಾ ರಿಲಿಜಿಯಸ್ ಚಾರಿಟಿಬಲ್ ಇನ್ಸ್ಟಿಟ್ಯೂಟುಗಳು ಸರ್ಕಾರದ ವಹಿವಾಟಿಗೆ ತೆಗೆದುಕೊಳ್ಳಬೇಕೆಂದಿಲ್ಲವೇ ?

Sri M. P. PATIL.—ಇಲ್ಲ. The Hon'ble Member may see the Act. ಅದರಲ್ಲಿ ಎಷ್ಟೋ ಇದೆ. ಯಾವ ಸಂಸ್ಥೆಗಳಿಗೆ ಸರ್ಕಾರಿ ಗ್ರಾಂಟ್ ಬರುತ್ತದೋ ಅಥವಾ ಯಾವ ಸಂಸ್ಥೆಗಳ ಬಗ್ಗೆ ಮಿಸ್‌ಮ್ಯಾನೇಜ್‌ಮೆಂಟ್ ಆಗಿದೆಯೋ, ಅಂಥವುಗಳ ಬಗ್ಗೆ ಎನ್‌ಕ್ವೈರಿ ಮಾಡಿ ಸರ್ಕಾರದವರು ಅವುಗಳ ಮ್ಯಾನೇಜ್‌ಮೆಂಟ್ ವಹಿಸಿಕೊಳ್ಳಬೇಕು ಎಂದಿದೆ.

ಶ್ರೀ ಜಿ. ಎಸ್. ಪುಟ್ಟಣ್ಣ.— ಈ ಶನಿದೇವರ ದೇವಸ್ಥಾನಕ್ಕೆ ತಿಂಗಳಿಗೆ ಸುಮಾರು ಎರಡು ಸಾವಿರ ರೂಪಾಯಿ, ವರ್ಷಕ್ಕೆ ಸುಮಾರು 30-35 ಸಾವಿರ ರೂಪಾಯಿ ಉತ್ಪತ್ತಿ ಬರುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ ?

ಶ್ರೀ ಎಂ. ಪಿ. ಪಾಟೀಲ್.—ಇನ್ನೂ ಎಕ್ಸ್‌ಕ್ವೈರಿ ಆಗುತ್ತಾ ಇದೆ. ಅಷ್ಟು ಉತ್ಪತ್ತಿ ಬರುತ್ತಿದೆಯೆಂದು ದೂರು ಬಂದಿದೆ.

ಶ್ರೀ ಜಿ. ಎಸ್. ಪುಟ್ಟಣ್ಣ..—ಎಕ್ಸ್‌ಕ್ವೈರಿ ಮಾರು ಮಾಡಿ ಸುಮಾರು 5 ವರ್ಷವಾಗಿದೆಯೆಂಬುದು ಸರ್ಕಾರದ ಅವಗಾಹನೆಗೆ ಬಂದಿದೆಯೇ ?

ಶ್ರೀ ಎಂ. ಪಿ. ಪಾಟೀಲ್.—ಇಲ್ಲ ; ಆದರೆ ಈ ಸಂದರ್ಭದಲ್ಲಿ ಡಿಸೆಂಬರ್ 1956 ರಲ್ಲಿ ಒಂದು ಅಪ್ಲಿಕೇಷನ್ ಡಿವಿಜನರ್ ಕಮಿಷನರಿಗೆ ಬಂದಿದೆ. ಈಗ ಅಮಲ್ದಾರರು ಎಕ್ಸ್‌ಕ್ವೈರಿ ಮಾಡುತ್ತಿದ್ದಾರೆ.